ಈ ಪ್ರಕರಣದ ಸತ್ಯಾಂಶವನ್ನು ಕಂಡುಹಿಡಿಯಲು ಸಿ.ಓ.ಡಿ ವಿಭಾಗದ ಐ.ಜಿ.ಪಿ ರವರಿಂದ ತನಿಖೆ ನಡೆಸಲಾಗುತ್ತಿದೆ. ವರದಿಯನ್ನು ನಿರೀಕ್ಷಿಸುತ್ತಿದ್ದೇವೆ.

**ಕೊಳ್ಳೇಗಾಲ ತಾಲ್ಲೂಕಿನ ಮಹದೇಶ್ವರ ಬೆಟ್ಟಕ್ಕೆ ಕುಡಿಯುವ ನೀರಿನ ಸೌಕರ್ಯ**

ಶ್ರೀ ಜಿ. ರಾಜೂಗೌಡ (ಹನೂರು) : ಕೊಳ್ಳೇಗಾಲ ತಾಲ್ಲೂಕಿನ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಪ್ರತಿ ವರ್ಷ ದೀಪಾವಳಿ ಶಿವರಾತ್ರಿ ಮತ್ತು ಯುಗಾದಿ ಹಬ್ಬದ ದಿನಗಳಲ್ಲಿ ನಾಲ್ಕಾರು ಲಕ್ಷ ಜನಗಳು ಒಂದೇ ಕಡೆ ಸೇರುವುದರಿಂದ ಕುಡಿಯುವ ನೀರಿನ ಬವಣೆಯನ್ನು ಹೋಗಲಾಡಿಸಲು ಶಾಶ್ವತವಾದ ಪರಿಹಾರ ಸಿಗಬೇಕಾದರೆ ಕಾವೇರಿ ನೀರನ್ನು ಪೂರೈಸದೆ ಗತ್ಯಂತರವಿಲ್ಲ. ಆದ್ದರಿಂದ ಕಾವೇರಿಯಿಂದ ನೀರು ಸರಬರಾಜು ಮಾಡಲು ರೂಪುರೇಷೆ ಸಿದ್ಧವಿದ್ದು ಅದಕ್ಕೆ ಸುಮಾರು 6 ಕೋಟಿ ರೂಪಾಯಿ ಬೇಕಾಗಿರುವುದರಿಂದ ದೇವಸ್ಥಾನದ ವತಿಯಿಂದ ನಾಲ್ಕನೇ ಒಂದು ಭಾಗದ ಹಣವನ್ನು ಕೊಡಲು ಒಪ್ಪಿರುವುದರಿಂದ ನಗರಾಭಿವೃದ್ಧಿ ಸಚಿವರು ಈ ಯೋಜನೆಗೆ ಮಂಜೂರಾತಿ ನೀಡಿ ಆದಷ್ಟು ಬೇಗನೆ ಕಾರ್ಯತತ್ಪರವಾಗುವಂತೆ ಅವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಕೆ. ಶಿವಮೂರ್ತಿ : (ಅಬಕಾರಿ ರಾಜ್ಯ ಸಚಿವರು) ಹೇಳಿಕೆ ಈ ರೀತಿ ಇದೆ.

ಮಾನ್ಯ ಅಧ್ಯಕ್ಷರೆ, ಮಲೆ ಮಹದೇಶ್ವರ ಬೆಟ್ಟವು ಮೈಸೂರು ಜಿಲ್ಲೆಯಲ್ಲಿನ ಒಂದು ಮುಖ್ಯವಾದ ಯಾತ್ರಾ ಸ್ಥಳವಾಗಿದೆ. ಅಲ್ಲಿ ಜನಸಂಖ್ಯೆ ಸುಮಾರು ಆರು ಸಾವಿರ ಇದ್ದು, ಹಬ್ಬ-ಹರಿದಿನಗಳಲ್ಲಿ ಸುಮಾರು ಐವತ್ತು ಸಾವಿರದಿಂದ ಒಂದು ಲಕ್ಷದಷ್ಟು ಆಗಬಹುದಾಗಿದೆ. ಈ ಯಾತ್ರಾ ಸ್ಥಳಕ್ಕೆ ಅಂತರಗಂಗೆ ಹೊಳೆಗೆ ಅಡ್ಡಲಾಗಿ ಕಟ್ಟಿರುವ ಅಣೆಕಟ್ಟಿನಿಂದ ಹಾಲಿ ನೀರು ಸರಬರಾಜು ಮಾಡಲಾಗುತ್ತಿದೆ. ಈ ಯೋಜನೆಯನ್ನು ಮಳೆ ಇಲ್ಲದ ಒಂದು ವರ್ಷವನ್ನು ಗಣನೆಗೆ ತೆಗೆದುಕೊಂಡು ಒಟ್ಟು ಎರಡು ವರ್ಷಕ್ಕೆ ಬೇಕಾಗುವ ಐವತ್ತು ದಶಲಕ್ಷ ಗ್ಯಾಲನ್ ನೀರನ್ನು ಸರಬರಾಜು ಮಾಡಲು ವಿನ್ಯಾಸಗೊಳಿಸಲಾಗಿತ್ತು. ದುರದೃಷ್ಟವಶಾತ್, ಈ ಜಲಾಶಯ ಬೇಸಿಗೆ ದಿನಗಳಲ್ಲಿ ಬತ್ತಿಹೋಗುತ್ತಿದ್ದು, ಇದರಿಂದಾಗಿ ನೀರು ಸರಬರಾಜಿಗೆ ತೀವ್ರ ತೊಂದರೆಯಾಗಿರುತ್ತದೆ. ಈ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸಲು ಅನೇಕ ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು, ಈ ಎಲ್ಲಾ ಕೊಳವೆಬಾವಿಗಳಿಂದ 0.15 ದಶಲಕ್ಷ ಗ್ಯಾಲನ್ ನೀರಿನ ಇಳುವರಿ ಇದ್ದು ಈ ಪ್ರಮಾಣವು ಸ್ಥಳೀಯ ಜನಸಂಖ್ಯೆಗೆ ಮಾತ್ರ ಸಾಕಾಗುತ್ತದೆ. ಮಲೆ ಮಹದೇಶ್ವರ ದೇವಸ್ಥಾನದ ಅಧಿಕಾರಿಗಳ ಕೋರಿಕೆ ಮೇರೆಗೆ ಹಬ್ಬ-ಹರಿದಿನಗಳಲ್ಲಿ ಬಂದು ಸೇರುವ ಹೆಚ್ಚು ಯಾತ್ರಾರ್ಥಿಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವಂತೆ ಕಾವೇರಿ ನದಿಯನ್ನು ಮೂಲವಾಗಿ ಇಟ್ಟುಕೊಂಡು ಒಂದು ಯೋಜನೆಯನ್ನು ರೂ.650 ದಶಲಕ್ಷಗಳಿಗೆ ಸರ್ಕಾರದ ವತಿಯಿಂದ ಮತ್ತು ಮಲೆ ಮಹದೇಶ್ವರ ದೇವಸ್ಥಾನದ ವತಿಯಿಂದ ತಯಾರಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗುತ್ತಿದೆ.

**ಕುಂದಾಪುರ ತಾಲ್ಲೂಕು ಅಲ್ಬಾಡಿ ಗ್ರಾಮದ ಅಡಿಕಾ ಪ್ರೌಢಶಾಲೆಗೆ ಶಿಕ್ಷಕರ ನೇಮಕಾತಿ.**

ಶ್ರೀ ಬಿ.ಎಂ. ಇದ್ದಿನಬ್ಬ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಯವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷಿಣಿಯವರಿಗೆ ಕುಂದಾಪುರ ತಾಲ್ಲೂಕು ಅಲ್ಬಾಡಿ ಗ್ರಾಮದ ಅಡಿಕಾ ಜೆ.ಪ. ಪ್ರೌಢ ಶಾಲೆಯಲ್ಲಿ ಸುಮಾರು 160 ಕ್ಕೂ ಮೇಲ್ಪಟ್ಟ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು ಕಳೆದ 2-3 ವರ್ಷಗಳಿಂದಲೂ ಈ ಶಾಲೆಯು ಶಿಕ್ಷಕರ ಕೊರತೆಯಿಂದ ಕೂಡಿದ್ದು ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತುಂಬಾ ತೊಂದರೆಯಾಗಿದೆ. ಈಗ ಈ ಶಾಲೆಯಲ್ಲಿ ಮುಖ್ಯೋಪಾಧ್ಯಾಯರೂ ಸೇರಿ 4 ಜನ ಶಿಕ್ಷಕರಿರುತ್ತಾರೆ. ಈಗ ಈ 4